ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ**,** ಹೊಸದುರ್ಗ**.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ **1037/2023**

ಪಿಡಬ್ಲ್ಯೂ**-4**
ಸಿಡಬ್ಲ್ಯೂ**- 5**

ಸಾಕ್ಷಿಗೆ ದಿನಾಂಕ **13-03-2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

| | |
|---|---|
| ಸಾಕ್ಷಿಯ ಹೆಸರು | ಃ ವಿಜಯಕುಮಾರಿ ಆರ್ |
| ಗಂಡನ ಹೆಸರು | ಃ ಯಶವಂತ್ |
| ವಯಸ್ಸು | ಃ 43 ವರ್ಷ |
| ಉದ್ಯೋಗ | ಃ ಮಹಿಳಾ ಮುಖ್ಯ ಪೇದೆ ನಂಬರ್ 1168,<br>ಹೊಸದುರ್ಗ ಪೊಲೀಸ್ ಠಾಣೆ |
| ವಾಸಸ್ಥಳ | ಃ ಹೊಸದುರ್ಗ |

<u>ಮುಖ್ಯವಿಚಾರಣೆ ಮಾನ್ಯ ಸ**.**ಸ**.**ಅ ರವರಿಂದ</u>

ನಾನು ದಿನಾಂಕ 30.08.2020 ರಿಂದ ಇಲ್ಲಿಯ ವರೆಗೂ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಠಾಣೆಯಲ್ಲಿ ಮಹಿಳಾ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ

ದಿನಾಂಕ 6-8-2023 ರಂದು ಸಂಜೆ 4-30 ಗಂಟೆ ಸಮಯದಲ್ಲಿ ಚಾಸಾ -1 ರವರು ಠಾಣೆಯಲ್ಲಿ ಇದ್ದಾಗ ಹೊಸದುರ್ಗ ತಾಲ್ಲೂಕು ಮಳಲಿ ಗ್ರಾಮದ ಮಂಜಪ್ಪ ತಂದೆ ಬಸಪ್ಪ, 40 ಹಾಗೂ ಕಲಾವತಿ ಗಂಡ ಹನುಮಂತಪ್ಪ , 38 ವರ್ಷ ಇವರುಗಳು ಅಕ್ರಮವಾಗಿ ಮದ್ಯ ತುಂಬಿದ ಪೌಚುಗಳನ್ನು ಚೀಲದಲ್ಲಿಸಂಗ್ರಹಿಸಿ ಸಾರ್ವಜನಿಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ಹೊಸದುರ್ಗ ಟೌನ್ ನಿಂದ ಮಳಲಿ ಗ್ರಾಮಕ್ಕೆ ಸಾಗಟ ಮಾಡುತ್ತಿದ್ದಾರೆ ಎಂಬ ಬಗ್ಗೆ ಬಾತ್ಮಿ ಬಂದಿದ್ದು ಈ ಬಗ್ಗೆ ಜ್ಞಾಪನವನ್ನು ತಯಾರಿಸಿ ನಂತರ ಸಿಬ್ಬಂದಿಗಳ ಮೂಲಕ ಪಂಚರಾದ ಚಾಸಾ-2 ಮತ್ತು 3 ರವರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ನೋಟೀಸ್ ಜಾರಿ ಮಾಡಿ, ದಾಳಿ ಮಾಡುವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು ಅವರು ಒಪ್ಪಿಕೊಂಡಿರುತ್ತಾರೆ. ನಂತರ ಚಾಸಾ 1 ರವರೊಡನೆ ನಾನು ಮತ್ತು ಚಾಸಾ 4 ರವರು ಇಲಾಖಾ ವಾಹನದಲ್ಲಿ ಮಾಹಿತಿ ಬಂದ ಮಳಲಿ ಗ್ರಾಮಕ್ಕೆ ಹೋಗಿ ಬಸ್ ನಿಲ್ದಾಣದ ಹತ್ತಿರ ಹೋಗಿ ನೋಡಿದಾಗ ಇಬ್ಬರು ಆಸಾಮಿಗಳು ನಮ್ಮನ್ನು ನೋಡಿ ಓಡಿಹೋದರು. ಅವರನ್ನು ಹಿಡಿಯಲು ಪ್ರಯತ್ನಿಸಿದರೂ ಸಿಗಲಿಲ್ಲ. ನಂತರ ಅವರು ನಿಂತಿದ್ದ

ಸ್ಥಳಕ್ಕೆ ಹೋಗಿ ನೋಡಲಾಗಿ ಸ್ಥಳದಲ್ಲಿ ಒಂದು ಚೀಲ ಇದ್ದು ಅದರಲ್ಲಿ 90 ಎಂ ಎಲ್ ನ 39 ರಾಜಾ ವಿಸ್ಕಿಯ ಪೌಚ್ ಗಳು ಇರುವುದು ಕಂಡುಬಂತು. ಸದರಿ ಮದ್ಯ ಸಂಗ್ರಹಣೆ ಮಾಡಿದ ಬಗ್ಗೆ ಆರೋಪಿಗಳ ಬಳಿ ಯಾವುದೇ ದಾಖಲೆ ಅಥವಾ ರಹದಾರಿಪತ್ರ ಇರುವುದಿಲ್ಲ ಎಂದು ಖಚಿತಪಡಿಸಿಕೊಂಡು ದೊರೆತ ಎಲ್ಲಾ ಪ್ಯಾಕುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪಂಚರ ಸಮಕ್ಷಮ ಮಾದರಿಗೆ ತೆಗೆದು ಚೀಲದಿಂದ ಸುತ್ತಿ ದಾರದಿಂದ ಕಟ್ಟಿ ಕೆ.ಎಸ್.ಪಿ ಎಂಬ ಅರಗು ಸೀಲು ಕ್ರಮ ಜರುಗಿಸಲಾಯಿತು. ಓಡಿಹೋದ ವ್ಯಕ್ತಿಗಳನ್ನು ಮಳಲಿ ಗ್ರಾಮದ ಮಂಜಪ್ಪ ತಂದೆ ಬಸಪ್ಪ, 40 ವರ್ಷ ಹಾಗೂ ಕಲಾವತಿ ಗಂಡ ಹನುಮಂತಪ್ಪ , 38 ವರ್ಷ ಎಂದು ಪಂಚರು ತಿಳಿಸಿದರು. ಮಹಜರ್ ಕ್ರಮವನ್ನು ಸಂಜೆ 5-15 ರಿಂದ 6-10 ರವರೆಗೆ ಬರೆದು ಮುಗಿಸಲಾಯಿತು. ನಂತರ ಚಾಸಾ -1 ರವರು ಪಂಚನಾಮೆ ಮತ್ತು ಮಾಲನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ. ಈ ಬಗ್ಗೆ ನಾನು ನನ್ನ ಹೇಳಿಕೆ ನೀಡಿರುತ್ತೇನೆ.

ಆ ದಿನ ನಮ್ಮನ್ನು ನೋಡಿ ಓಡಿಹೋದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿಗಳು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ 1 ಮತ್ತು 2 ನೇ ಆರೋಪಿಗಳು. ರಾಸಾಯನಿಕ ಪರೀಕ್ಷೆಗಾಗಿ ಮಾದರಿಗೆ ತೆಗೆದ 90 ಎಂ ಎಲ್ ನ 39 ರಾಜಾ ವಿಸ್ಕಿಯ ಪೌಚ್ ಗಳನ್ನು ಈಗಾಗಲೇ ಒಟ್ಟಾಗಿ ಮುದ್ದೆ ಮಾಲು 1 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಶ್ರೀ ಹೆಚ್ ಎಸ್ ಕೆ ಆರೋಪಿ ಪರ ವಕೀಲರಿಂದಃ</u>

ದಿಃ6-8-2023 ರಂದು ಚಾಸಾ -1 ರವರು ಮಾಹಿತಿ ಬಂದ ತಕ್ಷಣ ಜ್ಞಾಪನವನ್ನು ತಯಾರು ಮಾಡಿರುತ್ತಾರೆ. ಜ್ಞಾಪನವನ್ನು ತಯಾರು ಮಾಡಿದ ನಂತರ ಕೃತ್ಯ ಸ್ಥಳಕ್ಕೆ ಹೋಗಿದ್ದು ಕೃತ್ಯ ಸ್ಥಳದ ಬಗ್ಗೆ ಬಾತ್ಮಿದಾರರು ಖಚಿತ ಮಾಹಿತಿ ನೀಡಿದ್ದರು. ನಾವು ಠಾಣೆಯಿಂದ ಹೊರಟಾಗ ಸಮಯ 4-45 ಆಗಿತ್ತು. ಬಾತ್ಮಿ ಬಂದಾಗ ಸಮಯ 4-30 ಆಗಿತ್ತು. ನಾನು ಸ್ಥಳಕ್ಕೆ ಹೋದಾಗ ಸಂಜೆ 5-10 ಆಗಿತ್ತು. ಪ್ರ.ವ. ವರದಿಯನ್ನು ಸಂಜೆ 4-40 ಕ್ಕೆ ತಯಾರು ಮಾಡಲಾಗಿರುತ್ತದೆ ಎಂದರೆ ಸರಿ. ದಿಃ 6-8--2023 ರಂದು ಚಾಸಾ -1 ರವರಿಗೆ ಯಾವುದೇ ಬಾತ್ಮಿ ಬಂದಿರುವುದಿಲ್ಲ ಮತ್ತು ನಾವು ಯಾವುದೇ ಅಬಕಾರಿ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಂತೆ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರನ್ನು ದಾಳಿಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರ ಸಹಿಗಳನ್ನು ನಿಪಿ-1 ಕ್ಕೆ ಸ್ಥಳದಲ್ಲಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಡಿಯಲ್ಲಿ ಮುದ್ದೆ ಮಾಲನ್ನು ಅಮಾನತ್ತುಪಡಿಸಿಕೊಂಡಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-1,4 ಮತ್ತು 5 ರ ದಾಖಲೆಗಳನ್ನು ಠಾಣೆಯಲ್ಲೇ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ ಗೂ

ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಗಳನ್ನು ಈ ದಿನವೇ ನಾನು ಮೊದಲಬಾರಿ ನೋಡುತ್ತಿರುವುದು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೆ.ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹೊಸದುರ್ಗ.